

ಸ್ನಾನ ಮಾಡುತ್ತಿರುವ ರಾಟವಾಳವನ್ನು 'ನಾನೂ ಬರಲೇ?' ಎಂದು ಕೇಳುತ್ತಿರುವ ಬೆಳ್ಗಣ್ಣ



ಸ್ನಾನ ಮುಗಿದ ನಂತರ ಮೈಕೊಡವಿದಾಗ



ತಡೆಯಿರಿ ನಾವು ಊಟ ಮುಗಿಸಿ ಬರುತ್ತೇವೆ ಎನ್ನುತ್ತಿರುವ ಸ್ನೇಹಿತರು



ಬನ್ನಿ ಬನ್ನಿ ನೀರಿನಾಟ ಆಡೋಣ ಎನ್ನುತ್ತಿರುವ ಬೆಳ್ಗಣ್ಣಗಳು

ಬಣ್ಣ ಅವುಗಳದು. ಬಣ್ಣದ ಕಾರಣದಿಂದಲೇ ಗಿಡಗಳ ಮಧ್ಯೆ ಸುಲಭವಾಗಿ ಅವು ಕಾಣಸಿಗವು. ಕುತ್ತಿಗೆ ಮತ್ತು ಎದೆ ಅಚ್ಚ ಹಳದಿ ಬಣ್ಣವಿದ್ದು, ಹೊಟ್ಟೆಯ ಭಾಗ ಬಿಳಿ. ಚೌಕಾಕಾರದ ಬಾಲವಿದೆ. ತೆಳುವಾದ, ಚೂಪಾದ ಮತ್ತು ತುದಿಯಲ್ಲಿ ತುಸು ಬಗ್ಗಿದ ಕೊಕ್ಕಿರುತ್ತದೆ. ಕಣ್ಣಿನ ಸುತ್ತ ಬಿಳಿ ಉಂಗುರವಿರುವುದರಿಂದ ವಿಶಿಷ್ಟ ಹೆಸರನ್ನು ಪಡೆದುಕೊಂಡಿದೆ.

ಬೆಳ್ಗಣ್ಣ ಸಾಮಾನ್ಯವಾಗಿ ಮರವಾಸಿ. ಮೆದುವಾದ ಸಣ್ಣ ಗಂಟೆಯ ನಿನಾದದಂತಹ ಸ್ವರ ಅದರದು. ಐದರಿಂದ ಇಪ್ಪತ್ತು ಹಕ್ಕಿಗಳು ಗುಂಪಿನಲ್ಲಿ ವಾಸಿಸುತ್ತವೆ. ಸಂತಾನಾಭಿವೃದ್ಧಿ ಏಪ್ರಿಲ್‌ನಿಂದ ಜುಲೈವರೆಗೆ. ಆಹಾರಕ್ಕಾಗಿ ಕೀಟಗಳು, ಹೂವಿನ ಮಕರಂದ ಮತ್ತು ಹಣ್ಣನ್ನು ತಿನ್ನುತ್ತವೆ.

ಬೆಳ್ಗಣ್ಣಗಳು ಮರವಾಸಿಯಾಗಿದ್ದರೂ ನೆಲದಲ್ಲಿ ಜಲಕ್ರೀಡೆ ಆಡುವಾಗ ನನ್ನ ಕಣ್ಣಿಗೆ ಬಿದ್ದದ್ದು ಸೋಜಿಗವೇ ಸರಿ. ವಿಶಿಷ್ಟ ಹಕ್ಕಿಗಳ ವಿಶೇಷ ಜಲಕ್ರೀಡೆ ನೋಡುವ ಮತ್ತು ದಾಖಲಿಸುವ ಸೌಭಾಗ್ಯ ನನ್ನದಾಯಿತು.

ಪ್ರತಿಕ್ರಿಯಿಸಿ: **feedback@sudha.co.in**